ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಕ್ರೈಸ್ ಸಂಸ್ಥೆಯ ವಸತಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :-

326 (404) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಮತ್ತು ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ಸಂಸ್ಥೆಯ ವಸತಿ ಶಾಲೆಗಳಲ್ಲಿ ಸೇವೆ ಸಲ್ಲಿಸಿ ಇಲ್ಲಿಯವರೆಗೂ ನಿಧನರಾದ ನೌಕರರ ಸಂಖ್ಯೆ ಎಷ್ಟು; ನಿಧನರಾದ ನೌಕರರ ಕುಟುಂಬಕ್ಕೆ ಸರ್ಕಾರ ಮತ್ತು ಕ್ರೈಸ್ ಸಂಸ್ಥೆಗಳು ನೀಡಿರುವ ಪರಿಹಾರದ ಮೊತ್ತವೆಷ್ಟು ; (ಫಲಾನುಭವಿಗಳು ಪಡೆದ ಮೊತ್ತದ ವಿವರ ನೀಡುವುದು)

(ಆ) ಅನುಕಂಪದ ಆಧಾರದ ಮೇಲೆ ಸದರಿ ಸಂಸ್ಥೆಯಲ್ಲಿ ನೇಮಕಾತಿ ಮಾಡಲಾಗಿದೆಯೇ ; (ವಿವರ ನೀಡುವುದು)

(ಇ) ಇಲ್ಲವಾದಲ್ಲಿ, ಅನುಕಂಪ ಆಧಾರಿತ ನೌಕರಿ ನೀಡದಿರುವುದಕ್ಕೆ ಕಾರಣಗಳೇನು ;

(ಈ) ಸದರಿ ವಸತಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ ನೌಕರರಿಗೆ ಮರಣ ಉಪದಾನ (DCRG) ಸೌಲಭ್ಯ ನೀಡದಿರುವುದಕ್ಕೆ ಕಾರಣಗಳೇನು;

(ಉ) ಸದರಿ ಖಾಯಂ ನೌಕರರುಗಳಿಗೆ ಎಂಪ್ಲಾಯ್ ಗ್ರಾಚ್ಯುಟಿ ಇನ್ಶೂರೆನ್ಸ್ ಸ್ಕೀಮ್ (EGIS) ಮೊತ್ತ ನೀಡಲಾಗುತ್ತಿದೆಯೇ ; ಹಾಗಾದಲ್ಲಿ, ಸದರಿ ಮೊತ್ತದ ಪ್ರಮಾಣವೆಷ್ಟು ; ಇಂದಿನವರೆವಿಗೂ ಎಷ್ಟು ಮೃತ ನೌಕರರುಗಳಿಗೆ ಸದರಿ ಸೌಲಭ್ಯ ಒದಗಿಸಲಾಗಿದೆ ; (ವಿವರ ನೀಡುವುದು)

(ಊ) ಸದರಿ ಸಂಸ್ಥೆಯ ಖಾಯಂ ಸಿಬ್ಬಂದಿಗಳಿಗೆ "ಜ್ಯೋತಿ ಸಂಜೀವಿನಿ" ಮತ್ತು ನಗದು ರಹಿತ ಚಿಕಿತ್ಸಾ ಸೌಲಭ್ಯಗಳು ಅನ್ವಯಿಸುವುದಿಲ್ಲವೇ; ಇಲ್ಲವಾದಲ್ಲಿ, ಅನ್ವಯಿಸದಿರುವುದಕ್ಕೆ ಕಾರಣಗಳೇನು ? (ಮಾಹಿತಿ ನೀಡುವುದು)